ಸಂಪಾದಕ : ಮಂಜು ಬನವಾಸೆ

# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 134 | Pages. 2 | Date: 30-04-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 134 - ಪುಟಗಳು : 2 | 30-04-2026 | ಗುರುವಾರ | Ph: 8762954248 | ದರ : ₹1

# ಎಂ.ಟಿ.ಇ.ಎಸ್ ಅಧಿಕಾರ ಕದನ ಅಂತ್ಯ

## ಅಶೋಕ್ ಹಾರನಹಳ್ಳಿ ಬಣಕ್ಕೆ ಜಯ: ಅಧಿಕಾರ ಹಸ್ತಾಂತರಕ್ಕೆ ಹೈಕೋರ್ಟ್ ಆದೇಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಳೆದ ಏಳೆಂಟು ತಿಂಗಳಿನಿಂದ ಜಿಲ್ಲೆಯ ಪ್ರತಿಷ್ಠಿತ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯಲ್ಲಿ (ಎಂಟಿಇಎಸ್) ನಡೆಯುತ್ತಿದ್ದ ಅಧಿಕಾರಕ್ಕಾಗಿ ಹಗ್ಗ ಜಗ್ಗಾಟ ಹಾಗೂ ಸುದೀರ್ಘ ಕಾನೂನು ಹೋರಾಟಕ್ಕೆ ತೆರೆ ಬಿದ್ದಿದ್ದು, ಕಡೆಗೂ ಅಶೋಕ್ ಹಾರನಹಳ್ಳಿ ಬಣಕ್ಕೆ ಅಧಿಕಾರ ದಕ್ಕಿದೆ.









> ಮಲೆನಾಡು ಕಾಲೇಜಿಗೆ ಸಂಬಂಧಿಸಿದ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪು ಪ್ರಕಟಗೊಂಡಿದೆ. ಆದರೆ ಆ ಆದೇಶದ ಅಧಿಕೃತ ಪ್ರತಿ ಇನ್ನೂ ಲಭ್ಯವಾಗಿಲ್ಲ. ಪ್ರತಿ ಸಿಕ್ಕ ಬಳಿಕ ಈ ಬಗ್ಗೆ ವಕೀಲರೊಂದಿಗೆ ಚರ್ಚಿಸಿ ಮುಂದಿನ ಹೆಜ್ಜೆ ಇಡಲಾಗುವುದು.
> ಒಂದು ವೇಳೆ ತೀರ್ಪು ನಮ್ಮ ವಿರುದ್ಧವಾಗಿದ್ದರೆ, ಸುಪ್ರಿಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈವರೆಗೆ ನಾವು ಸಲ್ಲಿಸಿದ ಎಲ್ಲಾ ಅರ್ಜಿಗಳಲ್ಲೂ ನಮ್ಮ ಪರವಾಗಿಯೇ ತೀರ್ಪು ಬಂದಿವೆ. ಅಧಿಕೃತವಾಗಿ ಆದೇಶದ ಪ್ರತಿ ಸಿಕ್ಕ ಬಳಿಕ ಮುಂದಿನ ಕಾನೂನು ಹೋರಾಟದ ಹಾದಿ ನಿರ್ಧರಿಸಲಾಗುತ್ತದೆ.
>
> **- ಸಿ.ಆರ್.ಜಗದೀಶ್, ಕಾರ್ಯದರ್ಶಿ, ಎಂಟಿಇಎಸ್**

> ವಿಚಾರಣೆ ಉದ್ದಕ್ಕೂ ಆರ್.ಟಿ.ಡಿ ಬಣವು, ಸಮಿತಿಯ ಉಪ ವಿಧಿಗಳ ಪ್ರಕಾರ ಅವಿಶ್ವಾಸ ನಿರ್ಣಯ ಅಂಗೀಕಾರವಾಗಲು ಎರಡನೇ ಮೂರರಷ್ಟು (2/3) ಸಂಖ್ಯಾಬಲದ ಅಗತ್ಯವಿದೆ ಎಂದು ಪ್ರಬಲವಾಗಿ ವಾದಿಸಿತ್ತು.
> ಆದರೆ, ಈ ವಾದವನ್ನು ಸಾರಾಸಗಟಾಗಿ ತಳ್ಳಿಹಾಕಿದ ನ್ಯಾಯಪೀಠ, ಪ್ರಜಾ ಸತ್ತಾತ್ಮಕವಾಗಿ ಸರಳ ಬಹುಮತದ ಆಧಾರದ ಮೇಲೆ ಯಾರು ಅಧ್ಯಕ್ಷರಾಗಬೇಕು ಎಂಬ ಆಯ್ಕೆಯನ್ನು ಎತ್ತಿಹಿಡಿಯಿತು.

ಈ ಸಂಬಂಧ ಹೈಕೋರ್ಟ್ ಮಹತ್ವದ ತೀರ್ಪು ನೀಡುವ ಮೂಲಕ ಎಲ್ಲ ಗೊಂದಲಗಳಿಗೆ ಅಂತಿಮ ತೆರೆ ಎಳೆದಿದೆ. ಅಶೋಕ್ ಹಾರನಹಳ್ಳಿ ನೇತೃತ್ವದ ತಂಡವು ಮಂಡಳಿಯಲ್ಲಿ ಸರಳ ಬಹುಮತ ಸಾಬೀತುಪಡಿಸಿದ ಹಿನ್ನೆಲೆಯಲ್ಲಿ, ಅವರ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಾಲಯವು, ಕೂಡಲೇ ಅಶೋಕ್ ಹಾರನಹಳ್ಳಿ ತಂಡಕ್ಕೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣಕುಮಾರ್ ಅವರಿದ್ದ ಪೀಠವು ಮಹತ್ವದ ಅಂಶವೊಂದನ್ನು ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ. ಆಡಳಿತ ಮಂಡಳಿ ಸಮಿತಿಯಲ್ಲಿ ಬಹುಮತ ಕಳೆದುಕೊಂಡಿರುವ ಆರ್.ಟಿ. ದ್ಯಾವೇಗೌಡ ಮತ್ತವರ ತಂಡ, ತಕ್ಷಣವೇ ಅಶೋಕ್ ಹಾರನಹಳ್ಳಿ ಬಣದ ಬಿ.ಆರ್. ಗುರುದೇವ್ ಅವರಿಗೆ ಹಸ್ತಾಂತರಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ಈ ಮೂಲಕ ಬಿ.ಆರ್. ಗುರುದೇವ್ ಅವರು ಸಮಿತಿಯ ನೂತನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲು ಇದ್ದ ಎಲ್ಲಾ ಕಾನೂನು ಅಡೆತಡೆ ನಿವಾರಣೆ ಆದಂತಾಗಿದೆ.

ಹಿಂದಿನ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್ ಕಾಲೇಜಿನ ಆಡಳಿತ ಮಂಡಳಿಯ ಸಂಖ್ಯಾಬಲ ಪರೀಕ್ಷಿಸಲು ವಿಶೇಷ ನಿಯೋಜಕರನ್ನು ನೇಮಿಸಿತ್ತು.

ನ್ಯಾಯಾಲಯದ ಸೂಚನೆಯಂತೆ ಹಿರಿಯ ವಕೀಲ ಉಮಾಶಂಕರ್ ಅವರು ಹಾಸನಕ್ಕೆ ಭೇಟಿ ನೀಡಿ, ಅತ್ಯಂತ ಪಾರದರ್ಶಕವಾಗಿ ಬಹುಮತದ ಪರೀಕ್ಷೆ ನಡೆಸಿದ್ದರು. ಈ ಪ್ರಕ್ರಿಯೆಯಲ್ಲಿ ಅಶೋಕ್ ಹಾರನಹಳ್ಳಿ ಬಣದ ಪರವಾಗಿ 14 ಸದಸ್ಯರು ಬೆಂಬಲ ಸೂಚಿಸಿದರೆ, ಆರ್.ಟಿ. ದ್ಯಾವೇಗೌಡ ಹಾಗೂ ಜಗದೀಶ್ ಬಣದ ಪರವಾಗಿ ಕೇವಲ 10 ಸದಸ್ಯರು ಮಾತ್ರ ಕಾಣಿಸಿಕೊಂಡಿದ್ದರು. ಈ ವರದಿಯನ್ನು ಆಧರಿಸಿಯೇ ನ್ಯಾಯಾಲಯ ಈಗ ಅಂತಿಮ ತೀರ್ಪು ಪ್ರಕಟಿಸಿದೆ.

ಈ ಹಿಂದೆ ಆರ್.ಟಿ. ದ್ಯಾವೇಗೌಡರ ತಂಡವು ಮೂವರು ಸದಸ್ಯರನ್ನು ಅಮಾನತುಗೊಳಿಸಿತ್ತು. ಆದರೆ ಹಾಸನ ನ್ಯಾಯಾಲಯ ಈ ಅಮಾನತು ಆದೇಶಕ್ಕೆ ಮೊದಲೇ ಮಧ್ಯಂತರ ತಡೆ ನೀಡಿ, ಅವರ ಸದಸ್ಯತ್ವದ ಹಕ್ಕನ್ನು ಎತ್ತಿಹಿಡಿದಿತ್ತು.

ಆ ಮೂವರು ಸದಸ್ಯರು ಕೂಡ ಅಶೋಕ್ ಹಾರನಹಳ್ಳಿ ಬಣದ ಪರವಾಗಿ ನಿಂತಿದ್ದರಿಂದ ತಂಡದ ಬಲ ಮತ್ತಷ್ಟು ಹೆಚ್ಚಿತು.

ಬುಧವಾರ ಮಧ್ಯಾಹ್ನ ಈ ಕುರಿತು ಮೌಖಿಕ ಆದೇಶ ನೀಡಿದ ನ್ಯಾಯಾಲಯವು, ಬಿ.ಆರ್. ಗುರುದೇವ್ ಅವರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಬಹುದು ಎಂದು ಸೂಚಿಸಿದೆ. ಈ ಸಂಬಂಧ ವಿಸ್ತೃತ ಲಿಖಿತ ಆದೇಶವನ್ನು ಶೀಘ್ರದಲ್ಲೇ ಹೊರಡಿಸುವುದಾಗಿ ಪೀಠವು ತಿಳಿಸಿದೆ.

ಕಳೆದ ಎಂಟು ತಿಂಗಳಿನಿಂದ ಮಲೆನಾಡು ಕಾಲೇಜಿನ ಆಡಳಿತದ ಮೇಲೆ ಕವಿದಿದ್ದ ಅನಿಶ್ಚಿತತೆಯ ಮೋಡಗಳು ಈ ತೀರ್ಪಿನಿಂದ ದೂರಾದಂತಾಗಿದೆ. ಸಂಸ್ಥೆಯ ಅಭಿವೃದ್ಧಿ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಈ ತೀರ್ಪು ಅತ್ಯಂತ ಮಹತ್ವದ್ದಾಗಿದ್ದು, ಅಶೋಕ್ ಹಾರನಹಳ್ಳಿ ಬಣದ ಕಾನೂನು ಹೋರಾಟಕ್ಕೆ ಕಡೆಗೂ ನ್ಯಾಯ ಸಿಕ್ಕಿದೆ.

# ಸ್ಮಶಾನ ಜಾಗ ಉಳಿಸಲು ಎರೆಬೊರೆ ಕಾವಲ್ ಗ್ರಾಮಸ್ಥರ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ತಾಲೂಕಿನ ಎರೆಬೊರೆ ಕಾವಲ್ ಗ್ರಾಮದಲ್ಲಿ ಸ್ಮಶಾನಕ್ಕೆ ಮೀಸಲಿಟ್ಟಿದ್ದ ನಾಲ್ಕು ಎಕರೆ ಜಾಗದಲ್ಲಿ ಕಲ್ಲು ಕಾಣಿಗರಿಕೆಗೆ ಅನುಮತಿ ನೀಡಿರುವುದನ್ನು ಖಂಡಿಸಿ ಗ್ರಾಮಸ್ಥರು ಸ್ಮಶಾನ ಜಾಗದ ಬಳಿ ಪರಿಶೀಲನೆಗೆ ಆಗಮಿಸಿದ ಅಧಿಕಾರಿಗಳ ಜೊತೆ ವಾಗ್ವಾದ ನಡೆಸಿದರು.



1994 ರಲ್ಲಿ 4.20 ಎಕರೆ ಜಾಗವನ್ನು ರುದ್ರಭೂಮಿಗಾಗಿ ಮೀಸಲಿಟ್ಟ ಜಾಗವನ್ನು ಕ್ರಮೇಣವಾಗಿ ಅಧಿಕಾರಿಗಳು ಉಳ್ಳವರ ಪರವಾಗಿ ಕೆಲಸ ಮಾಡಿ ಸ್ಮಶಾನ ಭೂಮಿಯನ್ನು ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಿದ್ದಾರೆ ಕೂಡಲೇ ಮಂಜೂರಾತಿಯನ್ನು ರದ್ದು ಮಾಡಿ ಜಾಗವನ್ನು ಸ್ಮಶಾನಕ್ಕೆ ಮೀಸಲಿಡಬೇಕು ಎಂದು ಒತ್ತಾಯಿಸಿದರು.



ಈ ಸಂದರ್ಭದಲ್ಲಿ ಗ್ರಾಮದ ಶ್ರೀನಿವಾಸ್ ಮಾತನಾಡಿ, ಸುಮಾರು 45 ಮನೆಗಳನ್ನು ಹೊಂದಿರುವ ನಮ್ಮ ಗ್ರಾಮದಲ್ಲಿ ಸ್ಮಶಾನದ ಜಾಗವಿಲ್ಲದೆ ಕಷ್ಟವಾಗಿದೆ ಈ ಹಿಂದೆ ಮೀಸಲಿಟ್ಟಿದ್ದ ಜಾಗವನ್ನೇ ನಮಗೆ ಸ್ಮಶಾನಕ್ಕಾಗಿ ಮೀಸಲಿಡಬೇಕು, ಕಳೆದ ಹಲವು ವರ್ಷಗಳಿಂದ ನಮ್ಮ ಗ್ರಾಮದಲ್ಲಿ ಮೃತಪಟ್ಟವರನ್ನು ಇಲ್ಲಿಂದ ಸುಮಾರು 10 ಕಿಮೀ ದೂರವಿರುವ ಬಟ್ಟಗೌಡನಹಳ್ಳಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಂತ್ಯ ಸಂಸ್ಕಾರ ಮಾಡಲಾಗುತ್ತಿದೆ ಆದರೆ ಇದಕ್ಕಾಗಿ ಸುಮಾರು 20 ರಿಂದ 50 ಸಾವಿರ ವೆಚ್ಚ ತಗಲುತ್ತಿದ್ದು ಇದು ಬಡವರಿಗೆ ಹೊರೆಯಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಇದೇ ವಿಚಾರವಾಗಿ ಗ್ರಾಮ ಪಂಚಾಯತಿ, ತಹಶೀಲ್ದಾರ್, ಜಿಲ್ಲಾಧಿಕಾರಿಗಳು ಹೀಗೆ ಎಲ್ಲಾ ಅಧಿಕಾರಿಗಳಿಗೆ ಮನವಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ, ಅಧಿಕಾರಿಗಳು ಪ್ರಭಾವಿಗಳ ಜೊತೆ ಶಾಮೀಲಾಗಿ ಇದ್ದೊಂದು ಜಾಗವನ್ನು ಗ್ರಾಮಸ್ಥರ ಗಮನಕ್ಕೆ ಬಾರದೆ ಕಲ್ಲು ಗಣಿಗಾರಿಕೆ ಮಾಡಲು ಅನುಮತಿ ನೀಡಿದ್ದಾರೆ ಗ್ರಾಮದಲ್ಲಿ ಇದನ್ನು ಬಿಟ್ಟರೆ ಪರ್ಯಾಯ ಜಾಗವೂ ಇರುವುದಿಲ್ಲ ಆದುದರಿಂದ ಈ ಜಾಗ ಸ್ಮಶಾನಕ್ಕೆ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಈಗಾಗಲೆ ಸಂವಿಧಾನಬದ್ಧವಾಗಿ ಹಲವು ಬಾರಿ ಮನವಿ ಮಾಡಿದ್ದೇವೆ ಮುಂದೆ ನಮ್ಮ ಮನವಿಗೆ ಸ್ಪಂದಿಸಿ ಜಾಗವನ್ನು ಸ್ಮಶಾನಕ್ಕೆ ಮೀಸಲಿಡದೆ ಹೋದರೆ ಗ್ರಾಮದಲ್ಲಿ ಮೃತಪಟ್ಟವರನ್ನು ತಾಲೂಕು ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿಯೆದುರು ತಂದು ಅಲ್ಲಿಯೇ ಇಟ್ಟುಕೊಂಡು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಇದಲ್ಲದೆ ಗ್ರಾಮದಲ್ಲಿ ಸುಮಾರು 50 ವರ್ಷಗಳಿಂದ ವಿವಿಧ ಜಾತಿ ಜನಾಂಗದ ಸುಮಾರು 45 ಕುಟುಂಬಗಳು ವಸಮಾಡುತ್ತಿದ್ದು ತಮಗೆ ತಮಗೆ ಹಕ್ಕು ಪತ್ರ ನೀಡಬೇಕು ಎಂದು ಎಲ್ಲಾ ಅಧಿಕಾರಿಗಳಿಗೂ ಮನವಿ ಮಾಡಿದರೂ ಮನವಿ ಪತ್ರವನ್ನೂ ನೀಡಿಲ್ಲ ದಯಮಾಡಿ ಅಧಿಕಾರಿಗಳು ಇಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡಿ ಅನುಕೂಲ ಕಲ್ಪಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಚಂದ್ರೇಗೌಡ, ಅಭಿಷೇಕ್, ನಂದನ್ ಕುಮಾರ್, ಅಣ್ಣಾ ದೊರೆ, ದೊರೆಸ್ವಾಮಿ, ಮಂಜುಳಮ್ಮ, ಗೌರಮ್ಮ, ಈಶ್ವರಿ, ಕವಿತಾ, ತಂಗ್ಯಮ್ಮ, ಸೀಮಿತ್ರ, ಅನಿತಾ, ದ್ಯಾವಮ್ಮ, ಜ್ಯೋತಿ, ಮೀನಾಕ್ಷಿ, ಹರೀಶ, ಸಾಕಮ್ಮ, ದಮ್ಮಯ್ಯ, ಮಂಜು ನಾಯಕ್, ಅಭಿ, ಪ್ರಶಾಂತ, ಲಕ್ಷ್ಮಮ್ಮ, ಇತರರು ಉಪಸ್ಥಿತರಿದ್ದರು

# ಹಾಸನ ಎ.ವಿ.ಕೆ ಪಿಯು ಕಾಲೇಜಿನಲ್ಲಿ 'ಎವಿಕೆ ಟ್ಯಾಲೆಂಟ್ ಸ್ಕಾಲರ್ಶಿಪ್ ಟೆಸ್ಟ್' ಯಶಸ್ವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ ಜಿಲ್ಲೆಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಎ.ವಿ.ಕೆ ಪಿಯು ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ 'ಎವಿಕೆ ಟ್ಯಾಲೆಂಟ್ ಸ್ಕಾಲರ್ಶಿಪ್ ಟೆಸ್ಟ್' ಅತ್ಯಂತ ಯಶಸ್ವಿಯಾಗಿ ಜರುಗಿತು. ಜಿಲ್ಲೆಯ ವಿವಿಧ ಭಾಗಗಳಿಂದ ನೂರಾರು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದು, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಈ ಕಾರ್ಯಕ್ರಮಕ್ಕೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾಯಿತು.



ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮೊದಲ ಮೂರು ವಿದ್ಯಾರ್ಥಿಗಳಿಗೆ ಕ್ರಮವಾಗಿ ?10,000, ?7,000 ಮತ್ತು ?5,000 ನಗದು ಬಹುಮಾನ ಘೋಷಿಸಲಾಗಿದ್ದು, ಮುಂದಿನ 5 ವಿದ್ಯಾರ್ಥಿಗಳಿಗೆ ತಲಾ ?1,000 ಸಮಾಧಾನಕರ ಬಹುಮಾನ ನೀಡಿ ಗೌರವಿಸಲಾಯಿತು. ಕೇವಲ ನಗದು ಬಹುಮಾನ ಮಾತ್ರವಲ್ಲದೆ, ಮೊದಲ 20 ಶ್ರೇಯಾಂಕಿತ ವಿದ್ಯಾರ್ಥಿಗಳಿಗೆ 2025-26ನೇ ಸಾಲಿನ ಪ್ರವೇಶಾತಿಯಲ್ಲಿ ವಿಶೇಷ ರಿಯಾಯಿತಿ ಹಾಗೂ ಸ್ಕಾಲರ್ಶಿಪ್ ಸೌಲಭ್ಯವನ್ನು ಕಾಲೇಜು ಮಂಡಳಿ ನೀಡಿದೆ. ಇದೇ ಸುಸಂದರ್ಭದಲ್ಲಿ ಕಾಲೇಜು ಆಡಳಿತ ಮಂಡಳಿಯು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಮತ್ತೊಂದು ಮಹತ್ವದ ನಿರ್ಧಾರವನ್ನು ಪ್ರಕಟಿಸಿತು. ದೇಶದ ಪ್ರತಿಷ್ಠಿತ ತರಬೇತಿ ಸಂಸ್ಥೆಯಾದ 'ಆಕಾಶ್' (ಂಚಿಞಚಿsh) ನೊಂದಿಗೆ ಸಹಯೋಗ ಹೊಂದಿದ್ದು, ಇನ್ನು ಮುಂದೆ ಕಾಲೇಜಿನಲ್ಲಿಯೇ ಜೆಇಇ (ಎಇಇ) ಮತ್ತು ಐಐಟಿ (ಖ) ಪರೀಕ್ಷೆಗಳಿಗೆ ಉನ್ನತ ಮಟ್ಟದ ತರಬೇತಿ ನೀಡಲಾಗುವುದು ಎಂದು ತಿಳಿಸಲಾಯಿತು. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಪ್ರಮಾಣ ಪತ್ರ ವಿತರಿಸಲಾಗಿದ್ದು, ಪೋಷಕರು ಮತ್ತು ವಿದ್ಯಾರ್ಥಿಗಳು ಈ ವಿಶಿಷ್ಟ ಶೈಕ್ಷಣಿಕ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರವೇಶಾತಿ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ತಕ್ಷಣ ಕಾಲೇಜನ್ನು ಸಂಪರ್ಕಿಸಿ ಈ ಸೌಲಭ್ಯದ ಪ್ರಯೋಜನ ಪಡೆಯಬಹುದಾಗಿದೆ ಎಂದು ಕಾಲೇಜು ಆಡಳಿತ ಮಂಡಳಿ ತಿಳಿಸಿದೆ.

ಇನ್ನು ಕಾರ್ಯಕ್ರಮದಲ್ಲಿ ಕಾಲೇಜು ಆಡಳಿತ ಮಂಡಳಿಯ ಉಪಾಧ್ಯಕ್ಷರಾದ ನಾಗರಾಜ್ ಜೈನ್, ಆಕಾಶ್ ಸಂಸ್ಥೆಯ ರಿಜಿನಲ್ ಹೆಡ್ ಅನಿಲ್, ಬ್ರಾಂಚ್ ಮ್ಯಾನೇಜರ್ ನಾಗಭೂಷಣ್, ಕಾಲೇಜಿನ ಪ್ರಾಂಶುಪಾಲರಾದ ಕಾರ್ಮೆಲ್ ಶ್ರೀನಾ, ಮೈಲ್ ಸ್ಟೋನ್ ಸಂಸ್ಥೆಯ ಮುಖ್ಯಸ್ಥರಾದ ಪ್ರಜ್ವಲ್ ಸೇರಿದ್ದಂತೆ ಇತರರು ಹಾಜರಿದ್ದರು.

# ಎನ್‌ಸಿಇಆರ್‌ಟಿ ವಿಜ್ಞಾನ ಪಠ್ಯ ಬೋಧನೆಗೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯದಲ್ಲಿ 6 ರಿಂದ 10ನೇ ತರಗತಿವರೆಗೆ ಜಾರಿಯಲ್ಲಿರುವ ಎನ್.ಸಿ.ಇ.ಆರ್.ಟಿ. ರೂಪಿಸಿರುವ ವಿಜ್ಞಾನ ಪಠ್ಯಕ್ರಮ ಉತ್ತಮವಾಗಿದ್ದು, ಅದನ್ನು ಎಲ್ಲೆಡೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ನಿವೃತ್ತ ಉಪ ಪ್ರಾಂಶುಪಾಲ ಟಿ.ಎಂ. ಪಾರ್ಥಸಾರಥಿ ಬೇಸರವ್ಯಕ್ತಪಡಿಸಿದರು

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸದರಿ ಪಠ್ಯಕ್ರಮ ವಿದ್ಯಾರ್ಥಿಗಳಿಗೆ ಜ್ಞಾನ ಹಾಗೂ ಕೌಶಲ್ಯ ಬೆಳೆಸುವ ಉದ್ದೇಶ ಹೊಂದಿದೆ. ಆದರೆ ಡಿ.ಎಸ್.ಇ.ಆರ್.ಟಿ. ನಿರ್ದೇಶಕರು ಈ ಪಠ್ಯಕ್ರಮದ ಆಶಯಕ್ಕೆ ವಿರುದ್ಧವಾಗಿ ಎಲ್.ಬಿ.ಎ. (ಕಂಠಪಾಠ) ವಿಧಾನವನ್ನು ಹೇರಿಕೆ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದರು.



10ನೇ ತರಗತಿ ವಿಜ್ಞಾನ ವಿಷಯದಲ್ಲಿ ಪ್ರತಿಯೊಂದು ಅಧ್ಯಾಯದಲ್ಲೂ 10 ರಿಂದ 15 ಪ್ರಯೋಗ ಒಳಗೊಂಡಂತೆ ಸುಮಾರು 200 ಕ್ಕೂ ಹೆಚ್ಚು ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಜೀವಶಾಸ್ತ್ರ ಚಟುವಟಿಕೆಗಳನ್ನು ಎನ್.ಸಿ.ಇ.ಆರ್.ಟಿ. ಅಳವಡಿಸಿದೆ. ಈ ಮೂಲಕ ವಿದ್ಯಾರ್ಥಿಗಳು ಕೇವಲ ಕಂಠಪಾಠಕ್ಕೆ ಸೀಮಿತವಾಗದೆ, ಪ್ರಯೋಗಗಳ ಮೂಲಕ ವಿಷಯವನ್ನು ಅರ್ಥಮಾಡಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುವಂತೆ ಪಠ್ಯಕ್ರಮ ರೂಪಿಸಲಾಗಿದೆ ಎಂದರು. ಆದರೆ ಡಿಎಸ್ಇಆರ್‌ಟಿ ನಿರ್ದೇಶಕರು 30 ರಿಂದ 40 ಅಂಕ ಬರುವ ರೀತಿಯ ಕೆಲ ಪ್ರಶ್ನೆಗಳನ್ನು ಶಾಲೆಗಳಿಗೆ ನೀಡಿ, ಅವುಗಳನ್ನು ಎಲ್‌ಬಿಎ ವಿಧಾನದಲ್ಲಿ ಕಲಿಸುವಂತೆ ಸೂಚಿಸಿರುವುದು ವಿಜ್ಞಾನ ಪಾಠವನ್ನು ಕನ್ನಡ ಪಾಠದಂತೆ ಕಂಠಪಾಠದ ವಿಷಯವನ್ನಾಗಿ ಹೆಚ್ಚುಕಡೆ ಬೋಧಿಸಲಾಗುತ್ತಿದೆ ಎಂದು ಬೇಸರ ಹೊರ ಹಾಕಿದರು.

ಇದರಿಂದ ವಿದ್ಯಾರ್ಥಿಗಳು ಪ್ರಯೋಗಾತ್ಮಕ ಕಲಿಕೆಯಿಂದ ದೂರವಾಗಿದ್ದು, ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಈ ಬಾರಿ ವಿಜ್ಞಾನ ವಿಷಯದಲ್ಲಿ ಕೇವಲ 636 ವಿದ್ಯಾರ್ಥಿಗಳು ಮಾತ್ರ 100ಕ್ಕೆ 100 ಅಂಕ ಪಡೆದಿದ್ದಾರೆ ಎಂದರು.

ಎನ್.ಸಿ.ಇ.ಆರ್.ಟಿ. ಅತ್ಯುತ್ತಮ ವಿಜ್ಞಾನ ಪಠ್ಯಕ್ರಮ ರೂಪಿಸಿದ್ದು, ವಿದ್ಯಾರ್ಥಿಗಳು ವಿಜ್ಞಾನ ಅರ್ಥಮಾಡಿಕೊಂಡು ಕಲಿಯುವಂತೆ ಮಾಡಲಾಗಿದೆ. ಆದರೆ ಅದರ ವಿರುದ್ಧವಾಗಿ ಕಂಠಪಾಠ ಆಧಾರಿತ ಎಲ್‌ಬಿಎ ವಿಧಾನ ಜಾರಿಗೆ ತಂದು ವಿದ್ಯಾರ್ಥಿಗಳ ಕಲಿಕಾ ಮಟ್ಟ ಕುಗ್ಗಿಸಲಾಗಿದೆ. ಇದರಿಂದ ಹೆಚ್ಚಿನ ಅಂಕಗಳನ್ನು ಪಡೆಯುವ ಅವಕಾಶವೂ ವಿದ್ಯಾರ್ಥಿಗಳಿಗೆ ಕಡಿಮೆಯಾಗಿದೆ ಎಂದರು.

ಮುಂದೆಯಾದರೂ ಡಿ.ಎಸ್.ಇ.ಆರ್.ಟಿ. ನಿರ್ದೇಶಕರು ಶಾಲೆಗಳಿಗೆ ನಿರ್ದಿಷ್ಟ ಪ್ರಶ್ನೆಗಳನ್ನು ನೀಡುವ ಪದ್ಧತಿ ನಿಲ್ಲಿಸಿ, ವಿಜ್ಞಾನ ಶಿಕ್ಷಕರಿಗೆ ಸ್ವತಂತ್ರವಾಗಿ ಪ್ರಶ್ನೆ ರೂಪಿಸಿಕೊಳ್ಳಲು ಅವಕಾಶ ನೀಡಬೇಕು. ಶಿಕ್ಷಕರೇ ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಉತ್ತಮ ಬೋಧನೆ ಮಾಡಬಲ್ಲರು ಎಂದು ಹೇಳಿದರು.

# ಶಿವಕುಮಾರಾಚಾರಿ ಅವರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಕರ್ನಾಟಕ ಜಾನಪದ ಪರಿಷತ್ತು (ರಿ) ಬೆಂಗಳೂರು, ಜಿಲ್ಲಾ ಜಾನಪದ ಪರಿಷತ್ತು ಹಾಸನ, ತಾಲ್ಲೂಕು ಘಟಕ ಆಲೂರು ವತಿಯಿಂದ ಆಲೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಜಾನಪದ ಗೀತ ಸಂಭ್ರಮ ಕಾರ್ಯಕ್ರಮದಲ್ಲಿ ಹೊಳೆನರಸೀಪುರ ತಾಲ್ಲೂಕಿನ ಹಡವನಹಳ್ಳಿ ಸರಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕ, ಶಿವಕುಮಾರಾಚಾರಿ ಕೆ.ಅವರಿಗೆ "ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ" ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಶಿವಕುಮಾರಾಚಾರಿ ಕೆ.ಅವರು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಉತ್ತಮ ಬೋಧನಾ ಕೌಶಲಗಳನ್ನು ಅಳವಡಿಸಿಕೊಂಡಿರುತ್ತಾರೆ ಶಿಕ್ಷಣ, ಕಲೆ,,ಸಂಗೀತ,ಹಾಗೂ ಗಾಯನ ರಂಗದಲ್ಲಿನ ಅಪಾರ ಸಾಧನೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಟಿ.ಪಿ.ಪುಟ್ಟರಾಜು, ಜಿಲ್ಲಾ ಜಾನಪದ ಪರಿಷತ್ತಿನ ಅಧ್ಯಕ್ಷ ಡಾ.ಹಂಪನಹಳ್ಳಿ ತಿಮ್ಮೇಗೌಡ, ಸಾಹಿತಿಗಳಾದ ಮೇಟಿಕೆರೆ ಹಿರಿಯಣ್ಣ, ಎಂ.ಜಿ.ಪರಮೇಶ್ ಮಡಬಲು, ಕಮಲಮ್ಮ, ಕರವೇ ಜಿಲ್ಲಾ ಕಾರ್ಯದರ್ಶಿ ರಘುಪಾಳ್ಯ, ತಾಲ್ಲೂಕು ಲಯನ್ಸ್ ಸೇವಾ ಸಂಸ್ಥೆ ಅಧ್ಯಕ್ಷ ಬಿ.ಮಂಜೇಗೌಡ, ಮುಖ್ಯ ಶಿಕ್ಷಕ ಹೆಚ್.ಜೆ.ಹರೀಶ್ ಮಡಬಲು, ಕೆ.ಎನ್.ರಮೇಶ್, ಪ್ರಾಧ್ಯಾಪಕ ರಾಘವೇಂದ್ರ, ಉಪನ್ಯಾಸಕಿ ಸರಿತ ಉಪಸ್ಥಿತರಿದ್ದರು.

# ಜಯಶ್ರೀ ಹಾಸ್ಪಿಟಲ್ ನಾಳೆ ಲೋಕಾರ್ಪಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಳೆದ 35 ವರ್ಷಗಳಿಂದ ಯಶಸ್ವಿಯಾಗಿ ಜನ ಸೇವೆಯಲ್ಲಿ ತೊಡಗಿಸಿಕೊಂಡಿರುವ ನಗರದ ಜಯಶ್ರೀ ನರ್ಸಿಂಗ್ ಹೋಂ ಆಡಳಿತ ಮಂಡಳಿಯು, ಇದೀಗ ಕೆ.ಆರ್.ಪುರಂ 4ನೇ ಅಡ್ಡ ರಸ್ತೆಯಲ್ಲಿ ನೂತನ ಜಯಶ್ರೀ ಆಸ್ಪತ್ರೆ ನಿರ್ಮಿಸಿದ್ದು, ಲೋಕಾರ್ಪಣೆಗೊಳ್ಳಲಿದೆ ಎಂದು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ವೈ.ಎನ್.ಪಟ್ಟಾಭಿ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಬೆಳಗ್ಗೆ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಡಾ.ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಹಾಗೂ ಹಾಸನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಉದ್ಘಾಟನೆ ನೆರವೇರಿಸುವರು ಎಂದರು.



ಜಯಶ್ರೀ ಹಾಸ್ಪಿಟಲ್‌ನಲ್ಲಿ ಆಧುನಿಕ ಅತ್ಯುತ್ತಮ ತಂತ್ರಜ್ಞಾನದಿಂದ ಕೂಡಿದ ರೋಗ ಪತ್ತೆ ವಿಧಾನಕ್ಕೆ ಬಳಕೆ ಆಗುವ ನೂತನ ಸ್ವಯಂಚಾಲಿತ ಯಂತ್ರಗಳನ್ನು ಒಳಗೊಂಡ ಪ್ರಯೋಗಾಲಯ ಸ್ಥಾಪಿಸಲಾಗಿದೆ ಎಂದರು. ವಿಶೇಷವಾಗಿ ಮಧುಮೇಹ, ಥೈರಾಯಿಡ್ ಕಾಯಿಲೆ ಹಾಗೂ ಬಂಜೆತನಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಥಮವಾಗಿ ಕನ್ಸಲ್ಟೆಂಟ್ ಎಂಡೋಕ್ರಿನೋಜಿಸ್ಟ್ ಲಭ್ಯವಿರುತ್ತಾರೆ ಎಂದರು. ಆಸ್ಪತ್ರೆಯ ಹಿರಿಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಹೇಮಲತಾ ಪಟ್ಟಾಭಿ ಅವರು ಮಾತನಾಡಿ, ಇತರೆ ಸೂಪರ್ ಸ್ಪೆಷಾಲಿಟಿಗಳಾದ ಸರ್ಜಿಕಲ್ ಗ್ಯಾಸ್ಟ್ರೋ ಎಂಟೆರೊಲೊಜಿ, ನ್ಯೂರೋ ಸರ್ಜರಿ, ನವಜಾತ ಶಿಶು ಆರೈಕೆ, ಮಕ್ಕಳ ಬೆಳವಣಿಗೆ ಮತ್ತು ನರವಿಜ್ಞಾನ, ತೀವ್ರ ಅಸ್ವಸ್ಥ ಆರೈಕೆ ವಿಭಾಗಗಳಲ್ಲಿ ನುರಿತ, ಹಿರಿಯ ತಜ್ಞ ವೈದ್ಯರು, ಶಸ್ತ್ರ ಚಿಕಿತ್ಸಕರ ಸೇವೆ ಲಭ್ಯ ಇರುತ್ತದೆ ಎಂದು ತಿಳಿಸಿದರು.

ಒಟ್ಟಾರೆ ನಮ್ಮ ಆಸ್ಪತ್ರೆಯಲ್ಲಿ ಅನುಭವಿ ತಂಡವಿದೆ. ಹೈಟೆಲ್ ಪ್ರಯೋಗಾಲಯದಿಂದ ವಿವಿಧ ಕಾಯಿಲೆ ಪತ್ತೆ ಹಾಗೂ ಚಿಕಿತ್ಸೆಗಾಗಿ ಬೆಂಗಳೂರು, ಮೈಸೂರು ಕಡೆಗಳಿಗೆ ಹೋಗಬೇಕಿದ್ದವರು ಈಗ ಇಲ್ಲೇ ಚಿಕಿತ್ಸೆ ಪಡೆಯಬಹುದು ಎಂದರು. ಎಲ್ಲ ರೀತಿಯ ಸೇವೆಗಳು ದಿನದ 24 ಗಂಟೆಯೂ ಲಭ್ಯವಿದ್ದು, ಕಳೆದ 35 ವರ್ಷಗಳಿಂದ ಸಹಕಾರ ನೀಡುತ್ತಾ ಬರುತ್ತಿರುವ ಜಿಲ್ಲೆಯ ಜನರು ಮುಂದೆಯೂ ನೀಡಬೇಕು ಎಂದು ಮನವಿ ಮಾಡಿದರು.

ನಮ್ಮ ಆಂಬ್ಯುಲೆನ್ಸ್ ಫಿಜಿಯೋಥೆರಫಿ ಸಹ ಲಭ್ಯವಿದೆ. ಹೊಸ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕ, ಮಕ್ಕಳ ನಿಗಾ ಘಟಕ ಸೇರಿ 60 ಹಾಸಿಗಳಿವೆ ಎಂದರು. ಡಾ.ಗಾನವಿ ಮಾತನಾಡಿ, ನಮ್ಮ ಆಸ್ಪತ್ರೆಯಲ್ಲಿ ಎಬಿಐ ಟೆಸ್ಟ್, ಥೈರಾಯಿಡ್, ಒಬೆಸಿಟಿ, ಮೂಳೆ ಸಾಮರ್ಥ್ಯದ ಪರೀಕ್ಷೆ ಹೀಗೆ ಅಡ್ವಾನ್ಸ್ ಚಿಕಿತ್ಸೆ ಲಭ್ಯವಿದೆ ಎಂದು ತಿಳಿಸಿದರು.

ಡಾ.ಲಿಂಗರಾಜು ಮತ್ತು ಡಾ.ಪ್ರತಿಭಾ, ನಮ್ಮ ಆಸ್ಪತ್ರೆಯು ಹಿಂದಿನ ಬದ್ಧತೆ, ಪ್ರಾಮಾಣಿಕತೆಯನ್ನು ಉಳಿಸಿಕೊಂಡು ಮುಂದೆಯೂ ನಡೆಯಲಿದೆ. ಜನರಿಗೆ ಅನುಕೂಲ ಆಗಬೇಕು ಎಂಬುದು ನಮ್ಮ ಉದ್ದೇಶವಾಗಿದೆ ಎಂದರು.

# ಸಾಹಿತ್ಯ ಜನಮಾನಸದಲ್ಲಿ ಉಳಿಯಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹೊಳೆನರಸೀಪುರ: ಕವಿಯು ಬರೆದ ಸಾಹಿತ್ಯಕ್ಕೆ ಪ್ರಶಸ್ತಿ ಪುರಸ್ಕಾರ ದೊರೆಯುವುದಕ್ಕಿಂತ, ಸಾಹಿತ್ಯ ಜನ ಮಾನಸದಲ್ಲಿ ಶಾಶ್ವತವಾಗಿ ಉಳಿದಾಗ ಬದುಕು ಸಾರ್ಥಕವಾಗುತ್ತದೆ ಎಂದು ಸುಪ್ರಸಿದ್ಧ ಸಾಹಿತಿ ಬಿ.ಆರ್.ಲಕ್ಷ್ಮಣ್‌ರಾವ್ ತಿಳಿಸಿದರು.

ತಾಲ್ಲೂಕಿನ ಪಡುವಲಹಿಪ್ಪೆ ಗ್ರಾಮದ ಎಚ್.ಡಿ.ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ, ಕಾಲೇಜು ಶಿಕ್ಷಣ ಇಲಾಖೆ, ಹಾಸನ ವಿವಿ ವತಿಯಿಂದ ಆಯೋಜಿಸ ಲಾಗಿದ್ದ 2026ನೇ ಸಾಲಿನ ಸುಗ್ಗಿ ಹಬ್ಬ, ದೇಸಿ ಅಡುಗೆ ಮತ್ತು ಉಡುಗೆ, ಒಳಗೊಂಡ ನಮ್ಮ ನಾಡಿನ ಜಾನಪದ ಸಂಪ್ರದಾಯ ಮತ್ತು ಪರಂಪರೆಯನ್ನು ಇಂದಿನ ಯುವ ಜನತೆಗೆ ಪರಿಚಯಿಸುವ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಆಗಮಿಸಿ ಸಮಾರಂಭ ಉದ್ದೇಶಿಸಿ ಮಾತನಾಡಿದರು.

ಜನಪದ ಸಾಹಿತ್ಯವು ಗ್ರಾಮಾಂತರ ಪ್ರದೇಶಗಳಲ್ಲಿ ಮನದಿಂದ ಮನಕೆ,ಮನೆಯಿಂದ ಮನೆಗೆ ಇಂದಿಗೂ ತನ್ನ ಅಸ್ತಿತ್ವ ಉಳಿಸಿಕೊಂಡು ಬರಲು ಕಾರಣ ನಮ್ಮ ಹಿರಿಯರು, ಕಲಾವಿದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹಲವಾರು ಜನಪ್ರಿಯ ಭಾವಗೀತೆಗಳನ್ನು ರಚಿಸಿದ ಲಕ್ಷ್ಮಣ್‌ರಾಯರು, ಅವರ ಸುಪ್ರಸಿದ್ಧ ಗೀತೆ ಸುಬ್ಬಭಟ್ಟರ ಮಗಳೇ ಇದೆಲ್ಲಾನಿಂದೆ ತಗೊಳ್ಳೆ ಗೀತೆ ಹಾಡಿ ರಂಜಿಸಿದರು.

ಸಮಾರಂಭಕ್ಕೆ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಚಲನಚಿತ್ರ ನಿರ್ದೇಶಕ ಬಿ.ಎಸ್.ಲಿಂಗದೇವರು ಮಾತನಾಡಿ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರ್ಕಾರದ ಇತ್ತೀಚಿನ ಅವೈಜ್ಞಾನಿಕ ನಿಲುವು ಪ್ರಶ್ನಾರ್ಹವಾಗಿವೆ.

ವಸ್ತುನಿಷ್ಠವಾಗಿ ಚಿಂತನ ಮಂಥನ ನಡೆಸದೆ ಗೊಂದಲ ಸೃಷ್ಟಿಸಲು ಹೊರಟಿರುವ ಶಿಕ್ಷಣ ಇಲಾಖೆ ನಡೆ, ಸಾಮಾಜಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಪ್ರಸ್ತುತ ವಿದ್ಯಾರ್ಥಿಗಳು ತಮ್ಮನ್ನು ತಾವೇ ಆತ್ಮಾವಲೋಕನ ಮಾಡಿಕೊಳ್ಳುವ ಸಮಯ ಬಂದಿದೆ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳು ಅವರ ಭವಿಷ್ಯ ರೂಪಿಸುವುದಿಲ್ಲ.

ಬದಲಿಗೆ ಕಠಿಣ ಪರಿಶ್ರಮ ಮತ್ತು ಸಾಧನೆಯಿಂದ ಬದುಕು ರೂಪಿಸಿಕೊಳ್ಳಬೇಕು, ಮೊದಲಿಗೆ ನಮ್ಮ ಊರು ಕೇರಿ, ಕುಟುಂಬ, ಸಂಬಂಧಿಕರಿಗೆ ಮೊದಲ ಆದ್ಯತೆ ನೀಡಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವಿಶೇಷ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಹಾಸನ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ, ಸುಗ್ಗಿ ಹಬ್ಬಗಳನ್ನು ಶಾಲಾ ಕಾಲೇಜುಗಳಲ್ಲಿ ಆಚರಿಸುವ ಸಂಪ್ರದಾಯ ಅತ್ಯಂತ ಅರ್ಥಪೂರ್ಣವಾಗಿದೆ, ನಮ್ಮ ಸಂಸ್ಕೃತಿ, ಪರಂಪರೆ, ಹೊಲ ಗದ್ದೆ, ಗ್ರಾಮಾಂತರ ಪ್ರದೇಶದ ಆಚರಣೆ ರೀತಿರಿವಾಜುಗಳನ್ನು ನೆನಪಿಸಿ ಅರಿವು ಮೂಡಿಸುವ ಸುಗ್ಗಿ ಹಬ್ಬ ಔಚಿತ್ಯಪೂರ್ಣವಾಗಿದೆ. ಆದರೆ ಇಂದಿನ ವಿದ್ಯಾರ್ಥಿಗಳು ಮೊಬೈಲ್ ಬಳಕೆಯಿಂದ ಅವರ ಸುತ್ತಮುತ್ತಲಿನ ಅರಿವೇ ಇಲ್ಲವಾದಂತಾಗಿದೆ. ಸಂಬಂಧಗಳು, ತಂದೆ, ತಾಯಿ, ಸಹೋದರ,ಸಹೋದರಿ, ನೆಂಟರಿಷ್ಟರ ಬಗ್ಗೆ ಗಮನವೇ ಇಲ್ಲವಾಗಿದೆ. ಆದಷ್ಟು ವಿದ್ಯಾರ್ಥಿಗಳು ನಮ್ಮ ಮೂಲ ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಗೊಳಿಸಲು ಇಂತಹ ಕಾರ್ಯಕ್ರಮಗಳ ಅಗತ್ಯವಿದೆ, ನಾಡಿನ ನಂಟು, ಸಂಸ್ಕೃತಿಯ ಸೊಬಗು, ಹಳ್ಳಿಯ ಸುವಾಸನೆ, ಸಂಪ್ರದಾಯದ ಬೆಸುಗೆಯನ್ನು ಒಳಗೊಂಡ ಅರ್ಥಪೂರ್ಣವಾದ ಕಾರ್ಯಕ್ರಮ ಇದಾಗಿದೆ.

ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಕೊಡುಗೆ ನೀಡಿರುವ ಪ್ರೇಮಕವಿ ಎಂದೇ ಪ್ರಖ್ಯಾತರಾದ ಬಿ.ಆರ್. ಲಕ್ಷಣರಾವ್ ಮತ್ತು ಖ್ಯಾತ ಚಲನಚಿತ್ರ ನಿರ್ದೇಶಕ ಬಿ.ಎಸ್.ಲಿಂಗದೇವರು, ನಿವೃತ್ತ ಪ್ರಾಂಶುಪಾಲ ಜೆ.ಡಿ.ನಾರಾಯಣ್ ಇದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ವಿಶ್ವನಾಥ್.ಕೆ.ಸಿ. ವಹಿಸಿದ್ದರು, ಸಮಾರಂಭದಲ್ಲಿ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಡಾ.ಶಿವಕುಮಾರ್, ಐ.ಕ್ಯೂ.ಎ.ಸಿ.ಸಂಚಾಲಕ ಡಾ.ದೀಪು. ಎಚ್.ಎನ್., ಬೋಧಕ, ಬೋಧಕೇತರ ಸಿಬ್ಬಂದಿ, ಹಾಗೂ ವಿದ್ಯಾರ್ಥಿ ವೃಂದದವರು ಇದ್ದರು.ಕಾಲೇಜಿನಲ್ಲಿ ದೇಸಿ ಅಡುಗೆ ಮತ್ತು ದೇಸಿ ಉಡುಗೆ ಪ್ರತಿಬಿಂಬಿಸುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜಿಸಲಾಗಿತ್ತು.

## ತಾಲೂಕು ಸಂಘಕ್ಕೆ ಚುನಾವಣೆ ಘೋಷಣೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಹೊಳೆನರಸೀಪುರ ತಾಲ್ಲೂಕು ಘಟಕಕ್ಕೆ ಚುನಾವಣೆ ಘೋಷಣೆಯಾಗಿದ್ದು, ಅಧಿಕೃತ ವೇಳಾಪಟ್ಟಿಯಂತೆ ಎಲೆಕ್ಷನ್ ಪ್ರಕ್ರಿಯೆ ನಡೆಯಲಿದೆ ಎಂದು ಚುನಾವಣಾಧಿಕಾರಿ ಯೋಗೀಶ್ ಬೋರನಹಳ್ಳಿ ತಿಳಿಸಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ರ್; ,ಸದಸ್ಯರು ಈ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಚುನಾಯಿತ ಘಟಕ ರಚಿಸಲು ಸಹಕರಿಸಬೇಕೆಂದು ಕೋರಿದರು.

ನಾಮ ಪತ್ರಗಳನ್ನು ಹಾಸನ-ಮೈಸೂರು ರಸ್ತೆಯಲ್ಲಿರುವ ಅಖಿಲ ಭಾರತ ವೀರಶೈವ ಮಹಾಸಭೆಯ ಕಚೇರಿಯ ಸಮಯದಲ್ಲಿ ಪಡೆಯಬಹುದು.

ತಾಲ್ಲೂಕು ಘಟಕದ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಆಯ್ಕೆಗಾಗಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗಿದ್ದು, ಏ.29 ಬುಧವಾರ ಬೆಳಗ್ಗೆ 10.30 ರಿಂದ, ನಾಮಪತ್ರ ಸ್ವೀಕರಿಸುವ ಪ್ರಕ್ರಿಯೆ ಆರಂಭವಾಗಲಿದ್ದು, ಮೇ 6 ರ ವರೆಗೆ ಸಲ್ಲಿಸಬಹುದಾಗಿದೆ. ಬುಧವಾರ ಮಧ್ಯಾಹ್ನ 3ರವರೆಗೆ ನಾಮಪತ್ರ ಪರಿಶೀಲನೆ ನಡೆಯಲಿದ್ದು, ಮೇ 7 ಗುರುವಾರ ಬೆಳಗ್ಗೆ 10.30 ರಿಂದ ನಾಮಪತ್ರ ಹಿಂಪಡೆಯಬಹುದಾಗಿದೆ. ಮೇ 10 ರಂದು ಭಾನುವಾರ, ಮಧ್ಯಾಹ್ನ 3 ರವರೆಗೆ ಮತದಾನ ನಡೆಯಲಿದ್ದು, ಮೇ 24 ರಂದು ಮತ ಎಣಿಕೆ ನಿಗದಿಯಾಗಿದೆ. ಬೆಳಿಗ್ಗೆ 8 ರಿಂದ ಸಂಜೆ 4ರ ವರೆಗೆ ನಡೆಯಲಿದೆ. ಮತದಾನದ ಸ್ಥಳವನ್ನು ಶೀಘ್ರವಾಗಿ ತಿಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಕಾರ್ಯದರ್ಶಿ ಜಯಶಂಕರ್,ತಾಲ್ಲೂಕು ಅಧ್ಯಕ್ಷ ದೇವರಾಜು ಇದ್ದರು.

# ಮೇ 1 ರಂದು ಬುದ್ಧ ಜಯಂತಿ ಆಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಭಗವಾನ್ ಬುದ್ಧರ 2570ನೇ ಪವಿತ್ರ, ವೈಶಾಖ ಬುದ್ಧ ಪೌರ್ಣಿಮೆ (ಬುದ್ಧ ಜಯಂತಿ) ಅಂಗವಾಗಿ ಮೇ 1 ರಂದು ನಗರದಲ್ಲಿ ಆಕರ್ಷಕ ಮೆರವಣಿಗೆ ನಡೆಯಲಿದ್ದು, ಬಳಿಕ ಕಲಾಭವನದಲ್ಲಿ ಪ್ರಧಾನ ಕಾರ್ಯಕ್ರಮ ನಡೆಯಲಿದೆ ಎಂದು ಭಾರತೀಯ ಬೌದ್ಧ ಮಹಾಸಭಾದ ಜಿಲ್ಲಾಧ್ಯಕ್ಷ ಹೆಚ್.ಟಿ. ಬಸವರಾಜು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಬುದ್ಧ ಪೌರ್ಣಿಮೆಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಯುದ್ಧ ಬೇಡ, ಬುದ್ಧ ಬೇಕು ಎಂಬ ಸಂದೇಶ ಇಂದಿಗೂ ಜಗತ್ತಿನಾದ್ಯಂತ ಶಾಂತಿಯ ಸಂಕೇತವಾಗಿ ಪ್ರತಿಧ್ವನಿಸುತ್ತಿದೆ, ಅವುಗಳನ್ನು ಜನತೆಗೆ ತಿಳಿಸುವುದು ಜಯಂತಿ ಉದ್ದೇಶ ಎಂದು ಹೇಳಿದರು.

ಶುಕ್ರವಾರ ಬೆಳಗ್ಗೆ 10.30ಕ್ಕೆ ಡಿಸಿ ಕಚೇರಿ ಆವರಣದಿಂದ ಕಲಾಭವನದವರೆಗೆ ಬುದ್ಧರ ಭಾವ ಚಿತ್ರದೊಂದಿಗೆ ಮೆರವಣಿಗೆ ನಡೆಯಲಿದ್ದು, ಎಲ್ಲರೂ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಎನ್.ಆರ್. ವೃತ್ತ, ಮಹಾವೀರ ವೃತ್ತ ಮಾರ್ಗವಾಗಿ ಹಾಸನಾಂಬ ಕಲಾಕ್ಷೇತ್ರದವರೆಗೆ ಕಲಾ ತಂಡಗಳು, ಬುದ್ಧರ ರಥ, ಸಾಂಸ್ಕೃತಿಕ ಮೆರವಣಿಗೆ ಹಾಗೂ ವಿವಿಧ ಸಂಘಟನೆಗಳ ಭಾಗವಹಿಸುವಿಕೆಯಿಂದ ಭವ್ಯ ಶೋಭಾಯಾತ್ರೆ ನಡೆಯಲಿದೆ.

ಬೆಳಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಘನ ಉಪಸ್ಥಿತಿ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಉದ್ಘಾಟಿಸಲಿದ್ದು, ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಗೌರವ ಉಪಸ್ಥಿತಿ ಇರುವರು.

ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಸಂಸದ ಸಂಸದ ಶ್ರೇಯಸ್ ಎಂ. ಪಟೇಲ್, ಜಿಲ್ಲೆಯ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಜಿಲ್ಲಾಡಳಿತದ ಎಲ್ಲ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು. ಎನ್.ಬಿ.ವೀರಭದ್ರಯ್ಯ ಉಪನ್ಯಾಸ ನೀಡುವರು ಎಂದರು.

ಬುದ್ಧ ಪೂರ್ಣಿಮೆ ನಮ್ಮ ಮನೆಯ ಉತ್ಸವವಾಗಿದ್ದು, ಬಾಬಾಸಾಹೇಬರ ಋಣ ತೀರಿಸುವ ಸಂಕಲ್ಪದೊಂದಿಗೆ ಪ್ರತಿಯೊಬ್ಬರೂ ಭಾಗವಹಿಸಬೇಕು. ಸಮಾನತೆ, ಪ್ರೀತಿ, ಸಹಬಾಳ್ವೆ ಮತ್ತು ಧಮ್ಮದ ದಾರಿಯಲ್ಲಿ ಸಾಗುವ ಪ್ರತಿಜ್ಞೆ ಕೈಗೊಳ್ಳಬೇಕು ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಎನ್.ಬಿ. ವೀರಭದ್ರಯ್ಯ, ಮಲ್ಲೇಶ್ ಎ.ಟಿ., ರಂಗಪ್ಪ, ಕಾರ್ಯದರ್ಶಿ ಕುಮಾರ್ ಗೌರವ್ ಹಾಗೂ ಶ್ರೀಧರ ಕೆ.ಸಿ. ಇದ್ದರು.

## ಯುವಕನ ಕೊಲೆ: ನ್ಯಾಯಕ್ಕೆ ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಕಲೇಶಪುರ ತಾಲೂಕು ಮಠಸಾಗರ ಕೃಷ್ಣಾಪುರ ಗ್ರಾಮದ ನಿವಾಸಿ ಜೀವನ್ ಕುಮಾರ್ ಎಂಬ ಯುವಕ ಅನುಮಾನಾಸ್ಪದವಾಗಿ ಕೊಲೆಯಾಗಿ ಮೂರು ತಿಂಗಳು ಮುಗಿಯುತ್ತಾ ಬಂದಿದ್ದರೂ, ಇನ್ನೂ ಕೂಡ ಆರೋಪಿಗಳನ್ನು ಬಂಧಿಸಿಲ್ಲ, ಇದರಿಂದ ನಮಗೆ ಅನ್ಯಾಯವಾಗಿದೆ ಎಂದು ಯುವಕನ ತಂದೆ ಹಾಗೂ ಸಹೋದರಿ ಕಣ್ಣೀರಿಡುತ್ತಿದ್ದಾರೆ.

ಇಂದು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಕೊಲೆಯಾದ ಯುವಕನ ತಂದೆ ಶಿವಪ್ಪ ಮತ್ತು ಮತ್ತು ಸಹೋದರಿ ಪ್ರಿಯ, ಫೆಬ್ರವರಿ 2 ರಂದು ಕೊಲ್ಲಹಳ್ಳಿಯಲ್ಲಿ ಜಾತ್ರೆ ಇತ್ತು. ಅಲ್ಲಿಗೆ ನನ್ನ ತಮ್ಮನೂ ಹೋಗಿದ್ದ. ಆದರೆ ರಾತ್ರಿಯಾದರೂ ಬಾರದೇ ಇದ್ದಾಗ ಆತಂಕಗೊಂಡು ಫೋನ್ ಮಾಡಿದಾಗ ಆ ಕಡೆಯಿಂದ ಫೋನ್ ರಿಸೀವ್ ಮಾಡಿದ ಮೋಹನ್ ಪ್ರೀತಿ ಎಂಬ ಯುವಕ ನಾವು ಮದ್ಯ ಸೇವನೆ ಮಾಡುತ್ತಿದ್ದೇವೆ, ಗಾಂಜಾ ಸೇವನೆ ಮಾಡುತ್ತಿದ್ದೇವೆ. ನಮಗೆ ಪದೇ ಪದೆ ಕರೆ ಮಾಡಿ ತೊಂದರೆ ಕೊಡಬೇಡಿ ಎಂದ.

ಮತ್ತೊಮ್ಮೆ ನಿಮ್ಮ ಹುಡುಗನನ್ನು ದುಬೈಗೆ ಪಾರ್ಸೆಲ್ ಮಾಡುತ್ತೇವೆ. ಮಣ್ಣಿನ ಅಡಿಗೆ ಕಳಿಸುತ್ತೇವೆ ಎಂದು ಹೇಳಿದ್ದಾನೆ.

ಮಾರನೆಯ ದಿನ ನಮ್ಮ ತಮ್ಮ ಕೊಲೆಯಾಗಿರುವುದು ಗೊತ್ತಾಗಿದೆ. ಆದರೆ ಹೇಗಾಯಿತು ಎಂಬುದು ಈವರೆಗೂ ಗೊತ್ತಾಗಿಲ್ಲ. ಎಂದು ಕಣ್ಣೀರಿಟ್ಟರು.

ಅಂದು ಜೀವನ್ ಜೊತೆ ಇದ್ದ ಮೋಹನ್ ಪ್ರೀತಿ ಮತ್ತು ಭವಿತ್ ಎಂಬುವರು ಆತ್ಮೀಯ ಸ್ನೇಹಿತರಾಗಿದ್ದರು. ಆದರೂ ಯಾವ ಕಾರಣಕ್ಕೆ ತಮ್ಮನನ್ನ ಕೊಲೆ ಮಾಡಿದರು ಎಂಬುದು ನಿಗೂಢವಾಗಿಯೇ ಇದೆ ಎಂದರು.

ನಗರಠಾಣೆ ಪೊಲೀಸರಿಗೆ ದೂರು ನೀಡಿದ್ದರೂ ಅವರು ಸರಿಯಾಗಿ ತನಿಖೆ ನಡೆಸುತ್ತಿಲ್ಲ. ಕೇಳಲು ಹೋದರೆ ಸಾಗ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಎಸ್ಪಿ ಅವರ ಬಳಿಗೆ ಹೋದರೆ ಡಿವೈಎಸ್ಪಿ ಅವರ ಬಳಿಗೆ ಹೋಗಿ ಅಂತಾರೆ. ನಾವು ಸಾಕಷ್ಟು ಅಲೆದಾಡಿದರೂ, ನ್ಯಾಯ ಸಿಕ್ಕಿಲ್ಲ. ಬೈಕ್ ಮಾತ್ರ ಕೊಟ್ಟಿದ್ದಾರೆ. ಇನ್ನಾದರೂ ನಮಗೆ ನ್ಯಾಯ ಕೊಡಿಸದಿದ್ದರೆ ನಾಮೂ ಸಾಯುತ್ತೇವೆ ಎಂದು ಎಚ್ಚರಿಕೆ ನೀಡಿದರು.

## ಹಸು ಮಾಲೀಕನಿಗೆ ಚೆಕ್ ವಿತರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮಾಡಾಳು: ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟಿದ್ದ ಹಸುವಿನ ಮಾಲೀಕನಿಗೆ ವಿದ್ಯುತ್ ಇಲಾಖೆ ಅಧಿಕಾರಿಗಳು 45 ಸಾವಿರದ ಚೆಕ್ ನೀಡಿದ್ದಾರೆ.

ಕಣಕಟ್ಟೆ ಹೋಬಳಿ ತುಂಬಾ ಪುರ ಗ್ರಾಮದ ರೈತ ನಂಜುಂಡಯ್ಯ ಎಂಬುವರು ಹಾಲು ಕರೆದು ಜೀವನ ಸಾಗಿಸುತ್ತಿದ್ದ ಹಸು, ಹೊಲದಲ್ಲಿ ಮೇಯುತಿದ್ದ ವೇಳೆ ವಿದ್ಯುತ್ ತಂತಿ ತಾಗಿ ಮೃತಪಟ್ಟಿತ್ತು. ಇದರಿಂದ ಕಂಗಾಲಾದ ರೈತ ಪರಿಹಾರ ನೀಡಿ ಎಂದು ತಾಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದ್ದರು.

ಇವರ ಮನವಿಗೆ ಸ್ಪಂದಿಸಿದ ವಿದ್ಯುತ್ ಇಲಾಖೆ ಅಧಿಕಾರಿಗಳು ರೈತನಿಗೆ 45 ಸಾವಿರ ಮೊತ್ತದ ಚೆಕ್ ನೀಡಿದ್ದು ನೆಮ್ಮದಿಯ ನಿಟ್ಟಿಸಿರು ಬಿಟ್ಟಿದ್ದಾನೆ.

ಕಳೆದ ವರ್ಷ ಆ.28 ರಂದು ಹೊಲದಲ್ಲಿ ಮೇಯುತಿದ್ದ ವೇಳೆ ನೆಲಕ್ಕೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಹಸು ಸ್ಥಳದಲ್ಲೇ ಮೃತಪಟ್ಟಿತ್ತು.

ಬಳಿಕ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ನವೀನ್ ಮೊದಲಾದವರು ರೈತನಿಗೆ ಧೈರ್ಯ ಹೇಳಿ ಶಾಸಕ ಶಿವಲಿಂಗೇಗೌಡ ಹಾಗೂ ಸಂಸದ ಶ್ರೇಯಸ್ ಪಟೇಲ್ ಅವರ ಗಮನಕ್ಕೆ ತಂದು ಸರ್ಕಾರದಿಂದ ಪರಿಹಾರ ಕೊಡಿಸುವಂತೆ ಮನವಿ ಮಾಡಿದ್ದರು.

## ಇತಿಹಾಸದಲ್ಲಿ ಈ ದಿನ

### ಏಪ್ರಿಲ್-30

1906: ಅಮೇರಿಕದ ಕ್ಯಾಲಿಫೋರ್ನಿಯಾದ an Francisco ನಗರದಲ್ಲಿ ಭೀಕರ ಭೂಕಂಪ ಸಂಭವಿಸಿ ಸಾವಿರಾರು ಜನರು ಸಾವನ್ನಪ್ಪಿದರು, ನಗರ ಬಹುತೇಕ ನಾಶವಾಯಿತು.

1942: ದ್ವಿತೀಯ ವಿಶ್ವಯುದ್ಧದ ವೇಳೆ ಅಮೇರಿಕಾ ಜಪಾನ್ ಮೇಲೆ ನಡೆಸಿದ ಪ್ರಸಿದ್ಧ Doolittle Raid ದಾಳಿ ನಡೆಯಿತು.

1980: Zimbabwe ದೇಶವು ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದುಕೊಂಡಿತು.

2008: ಭಾರತ ತನ್ನ ಮೊದಲ ಮಾನವ ರಹಿತ ಚಂದ್ರಯಾನ ಯೋಜನೆ -1 ಅನ್ನು ಇದೇ ದಿನ ಯಶಸ್ವಿಯಾಗಿ ಪ್ರಾರಂಭಿಸಿತು.


**ಜನನ**

1859: ಕ್ರಿಕೆಟ್ ಕ್ರೀಡೆಯನ್ನು ಅಭಿವೃದ್ಧಿಪಡಿಸಿದ ಬ್ರಿಟಿಷ್ ಆಡಳಿತಗಾರ Lord Harris

**ಮರಣ**

1955: ಪ್ರಸಿದ್ಧ ವಿಜ್ಞಾನಿ Albert Einstein

## ನಾಲೆಗೆ ಉರುಳಿದ ಕಾರು ತಾಯಿ-ಮಗ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ವಿಫ್ಟ್ ಕಾರೊಂದು ನಾಲೆಗೆ ಬಿದ್ದ ಪರಿಣಾಮ ಕಾರಿನಲ್ಲಿದ್ದ ಆರು ಮಂದಿಯ ಪೈಕಿ ತಾಯಿ, ಮಗ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಉಳಿದ ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ ಚನ್ನರಾಯಪಟ್ಟಣ ತಾಲ್ಲೂಕಿನ ಮಲ್ಲನಘಟ್ಟ ಗ್ರಾಮದ ಬಳಿ ನಡೆದಿದೆ.

ಮೃತರನ್ನು ಪ್ರಿಯಾಂಕ (30), ವೈಭವ್ (ಒಂದೂವರೆ ವರ್ಷ) ಎಂದು ಗುರುತಿಸಲಾಗಿದೆ. ಬೆಂಗಳೂರಿನ ದೇವನಹಳ್ಳಿಯ ನಿವಾಸಿಗಳಾದ ಮಂಜುನಾಥ್, ಪತ್ನಿ ಪ್ರಿಯಾಂಕ, ಪುತ್ರ ವೈಭವ್, ಸಂಬಂಧಿಗಳಾದ ಚಂದನ್, ದಿಲೀಪ್, ದೇವರಾಜು ಕೆಎ-02-ಎಂಟಿ-2690 ನಂಬರ್‌ನ ಸ್ವಿಫ್ಟ್ ಕಾರಿನಲ್ಲಿ ಧರ್ಮಸ್ಥಳಕ್ಕೆ ಹೋಗಿ ವಾಪಾಸ್ ಆಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಹೇಮಾವತಿ ನಾಲೆಗೆ ಕಾರು ಬಿದ್ದಿದೆ. ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಗಾಯಾಳುಗಳನ್ನು ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರನ್ನು ನಾಲೆಯಿಂದ ಮೇಲೆತ್ತಲಾಗಿದೆ. ಚನ್ನರಾಯಪಟ್ಟಣ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಕಾಣೆಯಾದ ವ್ಯಕ್ತಿ ಪತ್ತೆಗಾಗಿ ಸಹಕರಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಹೊಳೆನರಸಿಪುರ ತಾಲ್ಲೂಕು, ಕಸಬಾ ಹೋಬಳಿ, ಮೂಡಲಹಿಪ್ಪೆ ಗ್ರಾಮದ 58 ವರ್ಷದ ಅಶೋಕ್ ಎಮ್.ಕೆ ಎಂಬ ವ್ಯಕ್ತಿ ಕಾಣೆಯಗಿದ್ದು, ಹೊಳೆನರಸಿಪುರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

5.4 ಅಡಿ ಎತ್ತರ, ಬಿಳಿಯ ಮೈಬಣ್ಣ, ಕನ್ನಡ ಭಾಷೆ ಮಾತನಾಡುತ್ತಾರೆ, ಸಧಾರಣ ಮೈಕಟ್ಟು, ಎರಡೂ ಅಂಗಾಲೂ ಕ್ರಾಸ್ ಆಗಿದ್ದು, ಎರಡೂ ಮೊಣಕಾಲು ಸಣ್ಣದಾಗಿರುತ್ತಾದೆ.

ಈ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹೊಳೆನರಸಿಪುರ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ : 08175-273333ಗೆ ಮಾಹಿತಿ ನೀಡಬಹುದಾಗಿದೆ ಎಂದು ಹೊಳೆನರಸೀಪುರ ಪೋಲಿಸ್ ಠಾಣೆಯ ಆರಕ್ಷಕ ಉಪನೀರಿಕ್ಷರು ತಿಳಿಸಿದ್ದಾರೆ.

## ಮದುವೆ ಆಗಲಿಲ್ಲ ಎಂದು ಜೀವ ಕಳೆದುಕೊಂಡ ಯುವಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು:ವಿವಾಹವಾಗಲು ಯುವತಿ ಸಿಗಲಿಲ್ಲ ಎಂದು ಮನನೊಂದ ಯುವಕ ಕಲ್ಯಾಣಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ. ವಿನಯ್ (35) ಆತ್ಮಹತ್ಯೆಗೆ ಶರಣಾದ ಯುವಕ.

ಪಟ್ಟಣದ ವಿಷ್ಣು ಸಮುದ್ರ ಕೆರೆಯ ಪಕ್ಕದಲ್ಲಿರುವ ಕಲ್ಯಾಣಿಯಲ್ಲಿ ಈ ಘಟನೆ ನಡೆದಿದ್ದು, ವಿನಯ್ ನಾಗರಾಜ್-ಪದ್ಮ ಎಂಬುವರ ಪುತ್ರನಾಗಿದ್ದಾನೆ.

ಪದವಿ ಓದಿದ್ದ ವಿನಯ್, ಮೂಲತಃ ಚಿಕ್ಕಮಗಳೂರು ಜಿಲ್ಲೆ, ಆಲ್ದೂರು ತಾಲ್ಲೂಕಿನ, ಗುಡ್ಡೂರು ಗ್ರಾಮದವನು.

ಕಳೆದ ಹತ್ತು ವರ್ಷಗಳಿಂದ ಬೇಲೂರು ಪಟ್ಟಣದ ಶಂಕರದೇವರ ಪೇಟೆಯಲ್ಲಿ ವಾಸವಿದ್ದ. ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತಿದ್ದ ಈತ, ಮದುವೆಯಾಗಲು ಐದಾರು ವರ್ಷಗಳಿಂದ ಹುಡುಗಿ ಹುಡುಕುತ್ತಿದ್ದ.

ಆದರೆ ಹುಡುಗಿ ಸಿಗದೆ ಮದುವೆ ಫಿಕ್ಸ್ ಆಗದ ಕಾರಣಕ್ಕೆ ತೀವ್ರವಾಗಿ ನೊಂದುಹೋಗಿದ್ದ. ಕಳೆದ ಒಂದು ವಾರದಿಂದ ಕೆಲಸಕ್ಕೂ ಹೋಗದೆ ಮನೆಯಲ್ಲೇ ಇದ್ದ. ಇದನ್ನು ಗಮನಿಸಿದ ಪೋಷಕರು, ಕೆಲಸಕ್ಕೆ ಹೋಗುವಂತೆ ಬೈದಿದ್ದರು.



ಇದರಿಂದ ಮನನೊಂದು ಕಲ್ಯಾಣಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮಿನುಗಾರರ ನೆರವಿನಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಕಲ್ಯಾಣಿಯಿಂದ ಮೃತದೇಹ ಹೊರಕ್ಕೆ ತೆಗೆದರು. ಸ್ಥಳಕ್ಕೆ ಪಿಎಸ್ಐ ಎಸ್.ಜಿ ಪಾಟೀಲ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಆಚಾರ್ಯ ಪದಕ್ಕೆ ವಿಶೇಷ ವಾದ ಅರ್ಥ ನೀಡಿದವರು ಶಂಕರಚಾರ್ಯರು : ಪರಮೇಶ್ವರ್ ವಿ.ಭಟ್




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಆಚಾರ್ಯ ಧರ್ಮಕ್ಕೆ ವಿಶೇವಾದ ಗೌರವ ನೀಡುವುದರ ಮೂಲಕ ತತ್ವಜ್ಞಾನಿಗಳಾಗಿ ವಿಶೇತೆಯನ್ನು ಶಂಕರಚಾರ್ಯರು ಪಡೆದಿದ್ದಾರೆ ಎಂದು ದೊಡ್ಡಗದ್ದವಳ್ಳಿ ಸರ್ಕಾರಿ ಪ್ರೌಢಶಾಲೆ ನಿವೃತ್ತ ಮುಖ್ಯೋಪಾಧ್ಯಾಯರಾದ ಪರಮೇಶ್ವರ್ ವಿ.ಭಟ್ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಹಾಸನಾಂಬ ಕಲಾಕ್ಷೇತ್ರದಲ್ಲಿ ಇಂದು ಏರ್ಪಡಿಸಲಾಗಿದ್ದ ಶ್ರೀ ಶಂಕರಾಚಾರ್ಯ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು ಸಮಾಜದ ಒಳಿತಿಗಾಗಿ ಶಂಕರಾಚಾರ್ಯರು ತತ್ವಪದಗಳ ಮೂಲಕ ಹಲವಾರು ಸಂದೇಶಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ ಹಾಗೂ ಮಾದರಿಯಾಗಿದ್ದಾರೆ ಎಂದರು.

ಒಳ್ಳೆಯ ಶಿಷ್ಯ ರಾಗಬೇಕು ಎಂದರೆ ಯೋಗ್ಯ ಗುರು ಇರಬೇಕು ಹಾಗೆಯೇ ಯೋಗ್ಯ ಗುರು ಆಗಬೇಕು ಅಂದರೆ ಯೋಗ್ಯ ಶ್ಯರು ಇರಬೇಕು ಎಂದು ಶಂಕರಾಚಾರ್ಯರು ಗುರು ಶ್ಯರ ಸಂಬಂಧಕ್ಕೆ ಮೆರುಗು ತಂದಿದ್ದಾರೆ ಎಂದು ತಿಳಿಸಿದರು.

ಆಳವಾದ ಭಾರತೀಯ ತತ್ವಜ್ಞಾನಿ ಮತ್ತು ದೇವತಾ ಶಾಸ್ತ್ರಜ್ಞರಾಗಿದ್ದು ಅದ್ವೈತ ವೇದಾಂತವನ್ನು ಪ್ರಚಾರ ಮಾಡುವ ಮೂಲಕ ಚಿಂತನೆಯನ್ನು ಏಕೀಕರಿಸಿ ಹಾಗೂ ಜಗತ್ತು ಭ್ರಮೆ ಮತ್ತು ವ್ಯಕ್ತಿಯ ಆತ್ಮವು ಪರಮಾತ್ಮನಿಂದ ಬೇರೆಯಲ್ಲ ಎಂಬ ಏಕತ್ವವನ್ನು ಅವರು ಪ್ರತಿಪಾದಿಸಿದರು ಎಂದು ಹೇಳಿದರು.

ಜ್ಞಾನ ಮಾರ್ಗದಿಂದ ಮೋಕ್ಷ ಸಾಧ್ಯ ಎಂಬುದು ಅವರ ಮುಖ್ಯ ಬೋಧನೆಯಾಗಿದೆ, ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯರಲ್ಲಿ ಶಂಕರಾಚಾರ್ಯರು ಮೊದಲಿಗರು ಹಾಗೂ ಸಮಾಜಕ್ಕೆ ಶಂಕರಾಚಾರ್ಯರ ಕೊಡುಗೆ ಅಪೂರ್ವ ಎಂದು ಹೇಳಿದರು.

ಶಂಕರಾಚಾರ್ಯರು ಹಿಂದೂ ಧರ್ಮದ ದಾರ್ಶನಿಕ ಅಡಿಪಾಯವನ್ನು ಬಲಪಡಿಸಿದವರು ಮತ್ತು ಸನಾತನ ಧರ್ಮದ ರಕ್ಷಕರೆಂದು ಹೆಸರಾದ ಮಹಾನ್ ತತ್ವಜ್ಞಾನಿಗಳು ಎಂದರು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಹಾಯಕರು ಎಲ್. ಎಸ್ ರಮೇಶ್ ಅವರು ಶಂಕರಚಾರ್ಯರ ತತ್ವಗಳು ಮತ್ತು ನಿರ್ದೇಶನಗಳನ್ನೂ ಪ್ರತಿನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಹೆಚ್. ಪಿ ತಾರಾನಾಥ್ ಹಾಗೂ ಮತ್ತಿತರು ಉಪಸ್ಥಿತಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248